# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಅಪರ ಜಿಲ್ಲಾ ಚುನಾವಣಾಧಿಕಾರಿಗಳು(ಕೇಂದ್ರ) ಹಾಗೂ ವಿಶೇಷ ಆಯುಕ್ತರು(ಆಡಳಿತ) ರವರ ಕಛೇರಿ,**
**ಕೇಂದ್ರ ಕಛೇರಿ ಆವರಣ, ಎನ್.ಆರ್.ಚೌಕ, ಬೆಂಗಳೂರು-560 002.**

**email:deo.bbmp@gmail.com** **Phone No.: +91-80-2297556**


ಸಂಖ್ಯೆ: ಇಎಲ್‌ಎನ್/ಕೇಂದ್ರ/ಪಿಆರ್/041/2020-21. ದಿನಾಂಕ: 20/11/2020.

## ಪತ್ರಿಕಾ ಪ್ರಕಟಣೆ

ಭಾರತ ಚುನಾವಣಾ ಆಯೋಗದ ಆದೇಶ ಸಂಖ್ಯೆ:23/2020-ERS, ದಿನಾಂಕ:04.09.2020ರಡಿ ವಿಶೇಷ ಮತದಾರರ ಪರಿಷ್ಕರಣೆ 2021ರನ್ವಯ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ದಿನಾಂಕಗಳಂದು ಮತದಾರರ ನೋಂದಾವಣೆಗೆ ವಿಶೇಷ ಅಭಿಯಾನವನ್ನು ಹಮ್ಮಿಕೊಳ್ಳಲು ನಿರ್ದೇಶನವಿರುತ್ತದೆ.

| ಕ್ರಮ ಸಂಖ್ಯೆ | ವಿಶೇಷ ಅಭಿಯಾನ ದಿನಾಂಕ | ವಿಶೇಷ ಅಭಿಯಾನ ದಿನ |
|---|---|---|
| 1 | 22/11/2020 | ಭಾನುವಾರ |
| 2 | 29/11/2020 | ಭಾನುವಾರ |
| 3 | 06/12/2020 | ಭಾನುವಾರ |
| 4 | 13/12/2020 | ಭಾನುವಾರ |

ಅದರಂತೆ, ಜಿಲ್ಲಾ ಚುನಾವಣಾಧಿಕಾರಿಗಳು ಬೆಂಗಳೂರು ರವರ ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳಲ್ಲಿನ ಮತದಾರ ನೋಂದಣಾಧಿಕಾರಿ ಹಾಗೂ ಸಹಾಯಕ ಮತದಾರ ನೋಂದಣಾಧಿಕಾರಿ ರವರ ಕಛೇರಿಗಳಲ್ಲಿ, ವಾರ್ಡ್ ಸಹಾಯಕ ಕೇಂದ್ರಗಳು ಮತ್ತು ಮತಗಟ್ಟೆಗಳಲ್ಲಿ ವಿಶೇಷ ಅಭಿಯಾನವನ್ನು ಹಮ್ಮಿಕೊಳ್ಳಲಾಗಿರುತ್ತದೆ. ಈ ವಿಶೇಷ ಅಭಿಯಾನವನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಲು ವಿನಂತಿ.

**ವಿಶೇಷ ಅಭಿಯಾನ ಸಮಯ: ಬೆಳಗ್ಗೆ : 09:00 ರಿಂದ ಸಂಜೆ : 06:00 ಗಂಟೆವರೆಗೆ.**

ದಿನಾಂಕ:01-01-2021ಕ್ಕೆ 18ವರ್ಷ ತುಂಬುವ ಅಂದರೆ 31-12-2002ರ ಹಿಂದೆ ಜನನವಾದ ಯುವಕ-ಯುವತಿಯರು ಕಡ್ಡಾಯವಾಗಿ ಮತದಾರರ ಪಟ್ಟಿಗೆ ಹೆಸರು ಸೇರಿಸಿ.

| **ಹೆಸರು ಸೇರ್ಪಡೆಗೆ ನಮೂನೆ-6** | **ಹೆಸರು ವಜಾ ಮಾಡಲು ನಮೂನೆ-7** | **ಹೆಸರು ತಿದ್ದುಪಡಿ ಮಾಡಲು ನಮೂನೆ-8** |
|---|---|---|
| ಬೇಕಾಗುವ ದಾಖಲೆ | ಬೇಕಾಗುವ ದಾಖಲೆ | ಬೇಕಾಗುವ ದಾಖಲೆ |
| 1. ಭಾವಚಿತ್ರ<br>2. ಶಾಲಾ ಟಿಸಿ ಅಥವಾ ನಕಲು ಅಂಕಪಟ್ಟಿ ನಕಲು<br>3. ಆಧಾರ್ ಕಾರ್ಡ್ ನಕಲು<br>4. ಪಡಿತರ ಚೀಟಿ ನಕಲು | ಮೃತ ವ್ಯಕ್ತಿಯ ಹೆಸರು ತೆಗೆಯಲು ಮರಣ ದೃಢೀಕರಣ ಪತ್ರ. | ಹೆಸರಿನ ಬಗ್ಗೆ ದಾಖಲುಗಳಾದ<br>1. ಅಂಕಪಟ್ಟಿ ನಕಲು<br>2. ಆಧಾರ್ ಕಾರ್ಡ್ ನಕಲು<br>3. ಪಾನ್ ಕಾರ್ಡ್ ನಕಲು |
| ಹಾಗೂ ಇತರೆ ಸಂಬಂಧಿತ ದಾಖಲೆಗಳು. | | |

**ಸೂಚನೆ:** ಪ್ರತಿಯೊಬ್ಬರೂ ತಮ್ಮ ಸಮೀಪದ ಬೂತ್ ಮಟ್ಟದ ಅಧಿಕಾರಿ ಅವರಲ್ಲಿ ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದನ್ನು ಪರಿಶೀಲಿಸಿ ಖಾತರಿಪಡಿಸಿಕೊಳ್ಳುವುದು.

ಜಿಲ್ಲಾ ಚುನಾವಣಾಧಿಕಾರಿಗಳು
ಹಾಗೂ ಆಯುಕ್ತರು ರವರ ಪರವಾಗಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ರವರಿಗೆ:
ಸಾರ್ವಜನಿಕ ಸಂಪರ್ಕಾಧಿಕಾರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.